ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 873 (880)

2) ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ
(ವಿಧಾನ ಸಭೆ ಕ್ಷೇತ್ರದಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 28-09-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ಹಲವಾರು ತೋಟಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿರುವುದರಿಂದ ರೈತರು ಹಾಗೂ ಕಾಫಿ ಬೆಳೆಗಾರರಿಗೆ ನಿರಂತರವಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಪ್ರಸ್ತುತ ವರ್ಷದಲ್ಲಿ ಎಷ್ಟು ಕಾಡಾನೆಗಳನ್ನು ಹಿಡಿಯಲು ಅನುಮತಿ ನೀಡಲಾಗಿದೆ;	ಪ್ರಸ್ತುತ ವರ್ಷದಲ್ಲಿ ಎರಡು ಕಾಡಾನೆಗಳನ್ನು ಸೆರೆಹಿಡಿಯಲು ಅನುಮತಿ ನೀಡಲಾಗಿರುತ್ತದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಾಡಾನೆಗಳನ್ನು ಹಿಡಿದು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಗಿದೆ? (ವರ್ಷವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಸೆರೆ ಹಿಡಿಯಲಾದ ಕಾಡಾನೆಗಳ ಸಂಖ್ಯೆ, ಸೆರೆ ಹಿಡಿದ ವರ್ಷ ಮತ್ತು ಬಿಡಲಾದ ಸ್ಥಳದ ವಿವರ ಈ ಕೆಳಕಂಡಂತಿದೆ.

ವಿಭಾಗ	ವರ್ಷ	ಸೆರೆ ಹಿಡಿಯಲಾದ ಆನೆಗಳ ಸಂಖ್ಯೆ	ಕಾಡಾನೆಯನ್ನು ಹಿಡಿದು ಸ್ಥಳಾಂತರಿಸಿದ ಮಾಹಿತಿ
ಮಡಿಕೇರಿ	2017-18	1	ಆನೆಕಾಡು ಮೀಸಲು ಅರಣ್ಯದ ಮಟ್ನಳ್ಳ ಪೈಸಾರಿಯಲ್ಲಿ ಕಾಡಾನೆಯನ್ನು ಹಿಡಿದು ಮೂಲೆಹೊಳೆಗೆ ಸಾಗಿಸಲಾಗಿದೆ.
ವೀರಾಜಪೇಟೆ ವನ್ಯಜೀವಿ ವಿಭಾಗ		-	-
ಒಟ್ಟು		1	-
ಮಡಿಕೇರಿ	2018-19	1	ಹೊಡೂರು ಗ್ರಾಮದ ಲಲಿತಾದ್ರಿ ಎಸ್ಟೇಟ್‌ನ ಗದ್ದೆಯಲ್ಲಿ ಸೆರೆ ಹಿಡಿದು ದುಬಾರೆ ಆನೆ ಶಿಬಿರಕ್ಕೆ ಸಾಗಿಸಲಾಗಿದೆ.
ವೀರಾಜಪೇಟೆ ವನ್ಯಜೀವಿ ವಿಭಾಗ		2	ಒಂದು ಗಂಡು ಮತ್ತು ಒಂದು ಹೆಣ್ಣಾನೆಯನ್ನು ಮತ್ತಿಗೋಡು ಸಾಕಾನೆ ಶಿಬಿರಕ್ಕೆ ಸಾಗಿಸಲಾಗಿರುತ್ತದೆ.
ಒಟ್ಟು		3	
ಮಡಿಕೇರಿ	2019-20	2	ಒಂದು ಹೆಣ್ಣಾನೆಯನ್ನು ಮೇರಿಲ್ಯಾಂಡ್ ಕಾಫಿತೋಟ ಸ.ನಂ. 25-24 ರಲ್ಲಿ ಹಿಡಿದು ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕಾಕನಕೋಟೆ ಮೀಸಲು ಅರಣ್ಯ ಪ್ರದೇಶಕ್ಕೆ ಬಿಡಲಾಗಿರುತ್ತದೆ. ಒಂದು ಗಂಡಾನೆಯನ್ನು ನಂಜರಾಯಪಟ್ಟಣ ಗಸ್ತಿನ ಚೇರಳ ಶ್ರೀಮಂಗಲ ಗ್ರಾಮದ ಕಾಫಿ ಬೋರ್ಡ್ ಕಾಫಿ ಎಸ್ಟೇಟ್ ಸ.ನಂ. 50/1 ರಲ್ಲಿ ಹಿಡಿದು ದುಬಾರೆ ಸಾಕಾನೆ ಶಿಬಿರಕ್ಕೆ ಬಿಡಲಾಗಿರುತ್ತದೆ.
ವೀರಾಜಪೇಟೆ ವನ್ಯಜೀವಿ ವಿಭಾಗ		1	ಶ್ರೀಮಂಗಲ ವನ್ಯಜೀವಿ ವಲಯದ ಕುರ್ಚಿಗ್ರಾಮದ ಕಾಫಿತೋಟದಿಂದ ಕಾಡಾನೆಯನ್ನು ಹಿಡಿದು ದುಬಾರೆ ಆನೆ ಶಿಬಿರಕ್ಕೆ ಸಾಗಿಸಲಾಗಿರುತ್ತದೆ.
ಒಟ್ಟು		3	

ಸಂಖ್ಯೆ: ಅಪಜೀ 160 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು